# ದೇವರಕೊಂಡ ಹಿಂದಿಗೆ

ತೆಲುಗಿನ ಖ್ಯಾತ ನಟ ವಿಜಯ ದೇವರಕೊಂಡ ಬಾಲಿವುಡ್‌ಗೆ ಲಗ್ಗೆ ಹಾಕುತ್ತಿದ್ದಾರೆ. 'ಹೌದು, ಬಾಲಿವುಡ್‌ನಿಂದ ಕರೆ ಬಂದಿದೆ. ಅಲ್ಲಿ ಹೋಗಿ ಕಿಚಡಿಯಂತೂ ಮಾಡುವುದಿಲ್ಲ. ಡ್ರಾಮಾ, ಆ್ಯಕ್ಷನ್ ಜೊತೆಗೆ ಪ್ರೀತಿ ತುಂಬಿದ ಸಿನಿಮಾಗಳನ್ನೇ ಮಾಡುತ್ತೇನೆ' ಎಂದು ಗೋವಾದಲ್ಲಿ ಪತ್ರಕರ್ತರಿಗೆ ಸ್ವತಃ ದೇವರಕೊಂಡ ಹೇಳಿದ್ದಾನೆ.

'ಗೀತಾ ಗೋವಿಂದಂ' ಮೂಲಕ ದಕ್ಷಿಣ ಭಾರತದಾದ್ಯಂತ ಜನಪ್ರಿಯತೆ ಪಡೆದ ವಿಜಯ್, ಇತ್ತೀಚೆಗೆ ನಟಿಸಿದ 'ಡಿಯರ್ ಕಾಮ್ರೇಡ್' ಭರ್ಜರಿ ಯಶಸ್ಸು ಪಡೆದಿದ್ದು, ಬಾಲಿವುಡ್‌ನ ಗಮನ ಸೆಳೆದಿದೆ. ಕನ್ನಡ ಮೂಲದ ರಶ್ಮಿಕಾ ಮಂದಣ್ಣ ಈ ಎರಡೂ ಚಿತ್ರದ ನಾಯಕಿ. 'ಡಿಯರ್ ಕಾಮ್ರೇಡ್' ಚಿತ್ರದ ಹಿಂದಿ ರೀಮೇಕ್ ಹಕ್ಕನ್ನು ಕರಣ್ ಜೋಹರ್‌ನ ಧರ್ಮ ಪ್ರೊಡಕ್ಷನ್ಸ್ ಪಡೆದುಕೊಂಡಿದೆ. ಬಾಲಿವುಡ್‌ನ ಹಲವು ನಟಿಯರೂ ಈ ಸುಂದರಾಂಗ ನಟನ ಅಭಿಮಾನಿಗಳಾಗಿರುವುದು ವಿಶೇಷ. ಶ್ರೀದೇವಿಯ ಮಗಳು ಜಾಹ್ನವಿ ಇತ್ತೀಚೆಗೆ ವಿಜಯ್ ಬಗ್ಗೆ ಬಹಿರಂಗವಾಗಿಯೇ ಹೊಗಳಿಕೆಯ ಹೊನ್ನಮಳೆ ಸುರಿಸಿದ್ದಾಳೆ. ವಿಜಯ್ ನಟಿಸುವ ಹಿಂದಿ ಚಿತ್ರಕ್ಕೆ ಆಕೆಯೇ ನಾಯಕಿ ಆದರೂ ಅಚ್ಚರಿಯಿಲ್ಲ.



■ ಹನಿ



# ಅಮಿತಾಭ್ ನಿವೃತ್ತಿ?

ಅಮಿತಾಭ್ ಬಚ್ಚನ್ ಚಿತ್ರರಂಗದಿಂದ ನಿವೃತ್ತಿ ಆಗುವ ಸಾಧ್ಯತೆ ಇದೆಯೆ? ಅದೇನೋ ಗೊತ್ತಿಲ್ಲ, ಆದರೆ ನಿವೃತ್ತಿಯ ಕುರಿತ ಮಾತು ಅಮಿತಾಭ್ ಅವರಿಂದಲೇ ಬಂದಿದೆ. 'ಬ್ರಹ್ಮಾಸ್ತ್ರ' ಚಿತ್ರದ ಶೂಟಿಂಗ್‌ಗಾಗಿ ಮುಂಬೈಯಿಂದ ಮನಾಲಿವರೆಗೆ ದೀರ್ಘ ಕಾರು ಪ್ರಯಾಣ ಮಾಡಿದ ಬಳಿಕ ಅಮಿತಾಭ್‌ಗೆ ಈ ಆಲೋಚನೆ ಬಂದಿದೆಯಂತೆ. ಹಾಗೆಂದು ಅವರು ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ. 'ನಾನು ನಿವೃತ್ತಿ ಆಗಬೇಕು. ತಲೆ ಒಂದು ಹೇಳಿದರೆ ಕೈ ಇನ್ನೊಂದು ಮಾಡುತ್ತಿದೆ. ದೇಹಕ್ಕೆ ಸಾಕು ಅನ್ನಿಸಿದಂತಿದೆ' ಎನ್ನುವುದು ಅಮಿತಾಭ್ ಅನಿಸಿಕೆ.

ಅನಿಸಿಕೆ ಏನೇ ಇರಲಿ, ಅಮಿತಾಭ್ ಇವತ್ತಿಗೂ ಬಿಡುವಿಲ್ಲದ ನಟ. ಡಿಸೆಂಬರ್ ತಿಂಗಳಲ್ಲಿ ಅವರು ನಟಿಸಿದ 'ಝುಂಡ್' ಬಿಡುಗಡೆಯಾಗಲಿದೆ. ಮರಾಠಿಯಲ್ಲಿ 'ಸೈರಾಟ್' ನಿರ್ದೇಶಿಸಿ ಖ್ಯಾತಿ ಹೊಂದಿದ ನಾಗರಾಜ್ ಮಂಜುಳೆ ನಿರ್ದೇಶನದ 'ಝುಂಡ್'ನಲ್ಲಿ ಕೊಳೆಗೇರಿ ಮಕ್ಕಳಿಗೆ ಫುಟ್‌ಬಾಲ್ ಕಲಿಸುವ ಕೋಚ್ ಪಾತ್ರ. 2020ರಲ್ಲಿ ಒಟ್ಟು ಏಳು ಸಿನಿಮಾಗಳು ಬಿಡುಗಡೆಯಾಗಲಿವೆ! ಅದೂ ಖ್ಯಾತನಾಮ ನಿರ್ದೇಶಕರದ್ದು. ಮಣಿರತ್ನಂ ಅವರ 'ಪೊನ್ನಿಯಿನ್ ಸೆಲ್ವನ್', ಇ.ನಿವಾಸ್ ನಿರ್ದೇಶನದ 'ಗುಮ್‌ನಾಮ್', ತಮಿಳ್‌ವಾನನ್ ನಿರ್ದೇಶನದ ತಮಿಳು–ಹಿಂದಿ ಚಿತ್ರ 'ಉಯಿರ್‌ಂದ ಮನಿದನ್' (ತೇರಾ ಯಾರ್ ಹೂಂ ಮೈ), ರೂಮಿ ಝಾಫ್ರಿ ನಿರ್ದೇಶನದ 'ಚೆಹ್ರೇ', ರಾಘವ ಲಾರೆನ್ಸ್ ನಿರ್ದೇಶನದ 'ಲಕ್ಷ್ಮಿ ಬಾಂಬ್", ಸೂಜಿತ್ ಸಿರ್ಕಾರ್ ನಿರ್ದೇಶನದ 'ಗುಲಾಬೊ ಸಿತಾಬೊ' ಅಮಿತಾಭ್ ನಟಿಸುತ್ತಿರುವ ಚಿತ್ರಗಳು. ವರ್ಷದ ಕೊನೆಗೆ 'ಬ್ರಹ್ಮಾಸ್ತ್ರ' ಬರಲಿದೆ. 2021ರಲ್ಲಿ 'ಜುವೆಲ್ಸ್ ಆಫ್ ಇಂಡಿಯಾ' ತೆರೆ ಕಾಣಲಿದೆ. ಇಷ್ಟೊಂದು ಬ್ಯುಸಿ ಇರುವ ಅಮಿತಾಭ್ ನಿವೃತ್ತಿಯ ಮಾತನಾಡುವುದು ತಮಾಷೆಯಾಗಿ ಕಾಣುತ್ತಿದೆ ಎನ್ನುವುದು ಅಭಿಮಾನಿಗಳ ಮಾತು. ■

# ಮರಳಿಬಂದ 'ಜುಮಾಂಜಿ'

ಅಮೆರಿಕದ ಲೇಖಕ ಕ್ರಿಸ್ ವ್ಯಾನ್ ಅಲ್ಸ್‌ಬರ್ಗ್‌ನ ಕಥೆಗಳ ಜುಮಾಂಜಿ ಸರಣಿಯ 4ನೇ ಸಿನಿಮಾ 'ಜುಮಾಂಜಿ: ದಿ ನೆಕ್ಸ್ಟ್ ಲೆವೆಲ್' ತೆರೆಗೆ ಸಿದ್ಧವಾಗಿದೆ. 1995ರಲ್ಲಿ ಮೊದಲ ಬಾರಿಗೆ 'ಜುಮಾಂಜಿ' ತೆರೆ ಕಂಡಿತು. ಬಳಿಕ 2005ರಲ್ಲಿ 'ಜಥುರಾ: ಎ ಸ್ಪೇಸ್ ಅಡ್ವೆಂಚರ್', 2017ರಲ್ಲಿ 'ಜುಮಾಂಜಿ: ವೆಲ್‌ಕಮ್ ಟು ದಿ ಜಂಗಲ್' ಬಂತು. ನಿರ್ದೇಶಕ ಜೇಕ್ ಕಾಸ್ಡನ್ ಈಗ ನಾಲ್ಕನೇ ಸರಣಿ ಚಿತ್ರಕ್ಕೆ ಜೀವ ತುಂಬಿದ್ದಾನೆ. 96ರಿಂದ 99ರವರೆಗೆ ಜುಮಾಂಜಿ ಸಾಹಸ ಟಿವಿಗಳಲ್ಲಿ ಕಾರ್ಟೂನ್ ರೂಪದಲ್ಲೂ ಧಾರಾವಾಹಿಯಾಗಿ ಬಂದಿತ್ತು. ಬಾಕ್ಸಾಫೀಸ್‌ನಲ್ಲಿ ಪ್ರತಿಸಲವೂ ದುಡ್ಡು ದೋಚಿರುವ ಜುಮಾಂಜಿ ಸಿನಿಮಾ, ವಿಡಿಯೊ ಗೇಮ್‌ಗಳು ಜನಪ್ರಿಯತೆಯ ತುತ್ತತುದಿ ತಲುಪಿರುವ ಈ ಕಾಲದಲ್ಲಿ ಥಿಯೇಟರ್‌ನಲ್ಲೂ ಹಣ ದೋಚುವುದರಲ್ಲಿ ಅನುಮಾನವಿಲ್ಲ. ಸೋನಿ ಪಿಕ್ಚರ್ಸ್ ಇಂಗ್ಲಿಷ್ ಮಾತ್ರವಲ್ಲದೆ ತಮಿಳು, ತೆಲುಗು, ಹಿಂದಿಗಳಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡುತ್ತಿದೆ. ■

